MARCH 17, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ರಾಯಚೂರಿನ ಕತೆಗಾರ, ಅಮರೇಶ ನುಗಡೋಣಿ ಅವರ, 'ದಡ ಸೇರಿಸು ತಂದೆ' ಕಥಾ ಸಂಕಲನಕ್ಕೆ, ಕೇಂದ್ರ ಸಾಹಿತ್ಯ ಅಕಾದೆಮಿ, 2025ನೇ ಸಾಲಿನ, ಪ್ರಶಸ್ತಿ.**

**ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ನಾಳೆ ಆರಂಭ; ರಾಜ್ಯ ಸಾರಿಗೆ ಸಂಸ್ಥೆಯಿಂದ, ವಿದ್ಯಾರ್ಥಿಗಳ ಉಚಿತ ಪ್ರಯಾಣಕ್ಕೆ, ಅನುಕೂಲ.**

**ಧಾರವಾಡ ತಾಲೂಕು, ಮನಸೂರಿನ, ಇಟ್ಟಿಗೆ ಭಟ್ಟಿಗಳಿಂದ, ನಾಲ್ವರು ಬಾಲ ಕಾರ್ಮಿಕರ ರಕ್ಷಣೆ.**

**ಪೋಲಿಯೋ ಜನ ಜಾಗೃತಿ; ಬೆಳಗಾವಿಯ ನರಸಿಂಹ ಜೋಶಿ, 2025–26ನೇ ಸಾಲಿನ, ರೋಟರಿ ಅಂತಾರಾಷ್ಟ್ರೀಯ ಸೇವಾ ಪ್ರಶಸ್ತಿಗೆ, ಭಾಜನ.**

<><><>

**ಈಗ ವಾರ್ತೆಗಳ ವಿವರ**

<><><>

**2025ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿಗೆ, ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿಯ ಹಿರಿಯ ಕತೆಗಾರ, ಡಾಕ್ಟರ್ ಅಮರೇಶ ನುಗಡೋಣಿ ಅವರ, 'ದಡ ಸೇರಿಸು ತಂದೆ' ಕಥಾ ಸಂಕಲನ, ಭಾಜನವಾಗಿದೆ. ಪ್ರಶಸ್ತಿ 1 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ಕೊಂಕಣಿ ಸಾಹಿತಿ, ಮಂಗಳೂರಿನ ಹೆನ್ರಿ ಮೆಂಡೊನ್ಸಾ ಅವರ 'ರೂಪಾನಿ ಅನಿ ರೂಪಕಾಂ' ಸಾಹಿತ್ಯ ವಿಮರ್ಶೆ ಕೃತಿಗೆ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಲಭಿಸಿದೆ. ಅಮರೇಶ ನುಗಡೋಣಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.**

<><><>

ಅಮರೇಶ ನುಗಡೋಣಿ ಧ್ವನಿ 50 ಸೆಕೆಂದುಗಳು

<><><>

ರಾಜ್ಯದಲ್ಲಿ ನಾಳೆಯಿಂದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗಲಿದ್ದು, ಏಪ್ರಿಲ್ 2 ರ ವರೆಗೆ ನಡೆಯಲಿವೆ. ಉತ್ತರಕನ್ನಡ ಜಿಲ್ಲೆಯ 73 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು, ಜಿಲ್ಲೆಯಲ್ಲಿ ಒಟ್ಟು 19 ಸಾವಿರದ 988 ವಿದ್ಯಾರ್ಥಿಗಳು ಮೊದಲ ಬಾರಿಗೆ ಪರೀಕ್ಷೆ ಬರೆಯಲಿದ್ದಾರೆ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳ ವರೆಗೆ ಪ್ರಯಾಣಿಸಲು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಉಚಿತ ಪ್ರಯಾಣದ ಅವಕಾಶ ಕಲ್ಪಿಸಲಿದೆ. ವಿದ್ಯಾರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರವನ್ನು ಬಸ್ ನಿರ್ವಾಹಕರಿಗೆ ತೋರಿಸುವ ಮೂಲಕ ಪರೀಕ್ಷಾ ಕೇಂದ್ರಗಳಿಗೆ ಪ್ರಯಾಣಿಸಬಹುದು ಹಾಗೂ ಪರೀಕ್ಷೆಯ ಬಳಿಕ ಸಂಸ್ಥೆಯ ನಗರ, ಉಪನಗರ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಹಿಂದಿರುಗಬಹುದು.

<><><>

ಧಾರವಾಡ ತಾಲೂಕು, ಮನಸೂರು ಗ್ರಾಮ ವ್ಯಾಪ್ತಿಯ, ಇಟ್ಟಿಗೆ ಭಟ್ಟಿಗಳಲ್ಲಿ ಕೆಲಸ ಮಾಡುತ್ತಿದ್ದ, ನಾಲ್ವರು ಬಾಲಕಾರ್ಮಿಕರನ್ನು, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ರಕ್ಷಿಸಿದ್ದಾರೆ. ಮಕ್ಕಳ ಕಲ್ಯಾಣ ಸಮಿತಿ ಮುಂದೆ, ಮಕ್ಕಳನ್ನು ಹಾಜರುಪಡಿಸಲಾಗಿದೆ. ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡ, ಇಟ್ಟಿಗೆ ಭಟ್ಟಿಗಳ ಮಾಲೀಕರ ವಿರುದ್ಧ, ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ.

<><><>

ಕೊಪ್ಪಳದ ಐತಿಹಾಸಿಕ ಹುಲಿಕೆರೆ ಅಕ್ರಮ ಒತ್ತುವರಿ ತೆರವುಗೊಳಿಸಲು ಹಾಗೂ ಕೆರೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು, ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದು, ಪೌರಾಡಳಿತ ಖಾತೆ ಸಚಿವ ರಹೀಂ ಖಾನ್ ತಿಳಿಸಿದ್ದಾರೆ. ವಿಧಾನ ಪರಿ ‘ತ್ತಿನ ಕಲಾಪದ ವೇಳೆ, ಶಾಸಕಿ ಹೇಮಲತಾ ನಾಯಕ ಅವರು, ನಿಯಮ 330 ರ ಅಡಿ ಮಂಡಿಸಿದ, ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, ಹುಲಿಕೆರೆಯ ಸಮೀಕ್ಷೆ ಕಾರ್ಯ ಪೂರ್ಣಗೊಂಡ ಬಳಿಕ, ಅಸಲಿ ಗಡಿಯನ್ನು ಗುರುತಿಸಿ, ಒತ್ತುವರಿ ತೆರವುಗೊಳಿಸಲಾಗುವುದು ಎಂದರು.

<><><>

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ, ಯಲಬುರ್ಗಾ ವಿಧಾನಸಭಾ ಕ್ಷೇತ್ರದ, 23 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಯೋಜನೆಗೆ, 125 ಕೋಟಿ ರೂಪಾಯಿ ಅನುದಾನ, ಮುಖ್ಯಮಂತ್ರಿ ಒದಗಿಸಿದ್ದಾರೆ. ಕ್ಷೇತ್ರದ ಶಾಸಕ ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ, ಬಸವರಾಜ ರಾಯರೆಡ್ಡಿ, ವಿಧಾನಸೌಧದ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಸನ್ಮಾನಿಸಿ, ಕೃತಜ್ಞತೆ ಸಲ್ಲಿಸಿದರು.

<><><>

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ–ಬಿಮ್ಸ್, 'ಎ' ವೃಂದದ 306 ಹುದ್ದೆಗಳ ಪೈಕಿ, 238 ಭರ್ತಿಯಾಗಿದ್ದು, 35 ತಜ್ಞ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ, ಶರಣಪ್ರಕಾಶ ಪಾಟೀಲ ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ಶಾಸಕ ಎಂ. ನಾಗರಾಜು ಅವರ, ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬಿಮ್ಸ್ ಆಸ್ಪತ್ರೆಯಲ್ಲಿ, ನಿತ್ಯ, ಸರಾಸರಿ ಸಾವಿರದ 70 ರಷ್ಟು ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದರು. ತುಮಕೂರು ಮತ್ತು ಮೈಸೂರಿನಲ್ಲಿ, ಹೊರಾವರಣ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆ ಕೇಂದ್ರ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರ ಕ್ಯಾನ್ಸರ್ ಪೀಡಿತರಿಗೆ ಚಿಕಿತ್ಸೆ ಆರಂಭವಾಗಲಿದೆ, ಎಂದು ಭರವಸೆ ನೀಡಿದರು.

<><><>

ಹೊಸ ದಿಲ್ಲಿಯ ರಾಷ್ಟ್ರೀಯ ರಕ್ಷಣಾ ಕಾಲೇಜು, ಎನ್.ಡಿ.ಸಿ. ಉನ್ನತ ಮಟ್ಟದ ನಿಯೋಗ, ಬೆಂಗಳೂರಿನ ಲೋಕ ಭವನದಲ್ಲಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ ಅವರನ್ನು ಭೇಟಿ ಮಾಡಿ, ಚರ್ಚಿಸಿತು. ಭಾರತೀಯ ಸಶಸ್ತ್ರ ಪಡೆಗಳು, ನಾಗರಿಕ ಸೇವೆಗಳು ಮತ್ತು ಸ್ನೇಹಪರ ವಿದೇಶಿ ರಾಷ್ಟ್ರಗಳಿಂದ ಬ್ರಿಗೇಡಿಯರ್ ಶ್ರೇಣಿಯ ಹಿರಿಯ ಅಧಿಕಾರಿಗಳು ನಿಯೋಗದಲ್ಲಿದ್ದರು.

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

**(40 ಸೆಕೆಂದುಗಳು)**

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕರ್ನಾಟಕ ರಾಜ್ಯದ ರೇಲ್ವೆ ಅಭಿವೃದ್ಧಿಗೆ, 7 ಸಾವಿರದ 748 ಕೋಟಿ ರೂಪಾಯಿ, ಮೀಸಲಿರಿಸಿದ್ದು, ಸಂತಸದ ಸಂಗತಿ ಎಂದು, ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ, ಲೋಕಸಭೆಯಲ್ಲಿ, ರೇಲ್ವೆ ಖಾತೆ ಸಚಿವರನ್ನು, ಅಭಿನಂದಿಸಿದರು. 2026–27ನೇ ಸಾಲಿಗೆ, ರೇಲ್ವೆ ಸಚಿವಾಲಯದ ಅನುದಾನ ಬೇಡಿಕೆಗಳ ಕುರಿತು, ಚರ್ಚೆಯ ವೇಳೆ ಅವರು, ಈ ವಿಷಯ ಮಂಡಿಸಿದರು. 2014ಕ್ಕೆ ಹೋಲಿಸಿದರೆ, ಕರ್ನಾಟಕದ ರೇಲ್ವೆ ಅಭಿವೃದ್ಧಿಗೆ, ಒಂಬತ್ತು ಪಟ್ಟು ಹೆಚ್ಚು ಹಣವನ್ನು ಮಂಜೂರು ಮಾಡಲಾಗಿದೆ. ಶಿವಮೊಗ್ಗ–ಶಿಕಾರಿಪುರ ಮತ್ತು ರಾಣಿಬೆನ್ನೂರು ರೈಲು ಮಾರ್ಗಕ್ಕಾಗಿ, ತಮ್ಮ ಜಮೀನುಗಳನ್ನು ನೀಡಿರುವ ರೈತರಿಗೆ, ಸಂಸದ ಬಿ.ವೈ.ರಾಘವೇಂದ್ರ ಧನ್ಯವಾದ ಸಲ್ಲಿಸಿದರು.

<><><>

ಪೋಲಿಯೋ ಮೂಲೋತ್ಪಾಟನೆಗಾಗಿ, ಲಸಿಕೆ ಅಭಿಯಾನದ ಕುರಿತು, ಗಮನಾರ್ಹ ಕೆಲಸ ಮಾಡಿದ, ಬೆಳಗಾವಿ ರೋಟೆರಿಯನ್ ನರಸಿಂಹ ಜೋಶಿ ಅವರಿಗೆ, 2025–26ನೇ ಸಾಲಿನ ರೋಟರಿ ಅಂತಾರಾಷ್ಟ್ರೀಯ ಸೇವಾ ಪ್ರಶಸ್ತಿ ಒಲಿದಿದೆ. ವಿಶ್ವದ ಹತ್ತು ಜನರಿಗೆ ನೀಡಲಾಗುವ, ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿರುವ, ನರಸಿಂಹ ಜೋಶಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನರಸಿಂಹ ಜೋಶಿ ಧ್ವನಿ 40 ಸೆಕೆಂದುಗಳು

<><><>

ವಿಜಯಪುರ ಜಿಲ್ಲೆ, ಬಬಲೇಶ್ವರ ಬಳಿಯ, ಸಿದ್ದಾಪುರ ಗ್ರಾಮದ ರೈತ, ಮಲ್ಲಪ್ಪ ಸಕ್ರಿ, ಕೆರೆ ತುಂಬುವ ಯೋಜನೆ ಸದುಪಯೋಗ ಪಡೆದುಕೊಂಡು, ತಮ್ಮ 4 ಎಕರೆ ಜಮೀನಿನಲ್ಲಿ, ದ್ರಾಕ್ಷಿ ಬೆಳೆದು, 35 ಲಕ್ಷ ರೂಪಾಯಿ ಲಾಭದ ನಿರೀಕ್ಷೆಯಲ್ಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ಪ್ರಗತಿಪರ ಕೃಷಿಕ ಮಲ್ಲಪ್ಪ ಸಕ್ರಿ ಅವರನ್ನು ಅಭಿನಂದಿಸಿದ್ದು,

ರೈತರ ಸಾಧನೆಗಳು, ನೀರಾವರಿ ಕ್ಷೇತ್ರದಲ್ಲಿ, ಇನ್ನಷ್ಟು ಪರಿಣಾಮಕಾರಿ ಕೆಲಸ ಮಾಡಲು, ತಮಗೆ ಪ್ರೇರಣೆ ನೀಡಿದೆ, ಎಂದು, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಚಾಮರಾಜನಗರ ಜಿಲ್ಲೆ, ಹನೂರು ತಾಲೂಕಿನ, ಪ್ರಸಿದ್ಧ ಯಾತ್ರಾ ಸ್ಥಳ, ಮಲೈ ಮಹದೇಶ್ವರ ಬೆಟ್ಟ ದೇವಸ್ಥಾನದ ಪಾವಿತ್ರ್ಯತೆ ಹಾಗೂ ಅರಣ್ಯ ಕಾಪಾಡಲು, ಏಕ ಬಳಕೆ ಪ್ಲಾಸ್ಟಿಕ್ ತಡೆಗಾಗಿ, ಮೈಸೂರಿನ ಪರಿಸರಾಸಕ್ತ, ಮಂಜುನಾಥ, ಏಕಾಂಗಿ ಸೈಕಲ್ ಜಾಥಾ ಆರಂಭಿಸಿದ್ದಾರೆ. ಚಾಮರಾಜನಗರ ಜಿಲ್ಲಾಡಳಿತ ಭವನದಲ್ಲಿ, ಜಿಲ್ಲಾಧಿಕಾರಿ ಶ್ರೀರೂಪಾ, ಏಕ ವ್ಯಕ್ತಿ ಜಾಥಾಕ್ಕೆ, ಚಾಲನೆ ನೀಡಿ, ಶುಭ ಹಾರೈಸಿದರು. ಪರಿಸರ ಪ್ರೇಮಿ ಮಂಜುನಾಥ, ಕಳೆದ 2017 ರಿಂದ ದೇಶದ ನಾನಾ ಭಾಗಗಳಲ್ಲಿ ಏಕಾಂಗಿ ಸೈಕಲ್ ಸವಾರಿ ಮೂಲಕ, ಪ್ಲಾಸ್ಟಿಕ್ ಮುಕ್ತ ಪರಿಸರ ಅಭಿಯಾನ ನಡೆಸುತ್ತಿದ್ದಾರೆ. ಈಗಾಗಲೇ, 7 ಸಾವಿರ ಕಿಲೋ ಮೀಟರ ಕ್ರಮಿಸಿದ್ದಾರೆ.

<><><>

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗಾಗಿ ಇಂದಿನಿಂದ, ಜಿಲ್ಲೆಯ ವಿವಿಧೆಡೆಗಳಲ್ಲಿ ವಿಶೇಷ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದೆ. ಇಂದು ಬೆಳ್ತಂಗಡಿ ತಾಲೂಕಿನ ಕಣಿಯೂರು, ಪುತ್ತೂರು ತಾಲೂಕಿನ ಕೊಯಿಲ, ಉಪ್ಪಿನಂಗಡಿ, ಸುಳ್ಯ ತಾಲೂಕಿನ ಬೆಳ್ಳಾರೆ ಹಾಗೂ ನಾಳೆ ಬೆಳ್ತಂಗಡಿ ತಾಲೂಕಿನ ಕೊಕ್ಕಡ ಹಾಗೂ 21 ರಂದು ಪುತ್ತೂರು ತಾಲೂಕಿನ ಪಾಣಾಜೆ ಆರೋಗ್ಯ ಕೇಂದ್ರಗಳಲ್ಲಿ ಶಿಬಿರಗಳನ್ನು ಏರ್ಪಡಿಸಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಯಚೂರಿನ ಕತೆಗಾರ, ಅಮರೇಶ ನುಗಡೋಣಿ ಅವರ, 'ದಡ ಸೇರಿಸು ತಂದೆ' ಕಥಾ ಸಂಕಲನಕ್ಕೆ, ಕೇಂದ್ರ ಸಾಹಿತ್ಯ ಅಕಾದೆಮಿ, 2025ನೇ ಸಾಲಿನ, ಪ್ರಶಸ್ತಿ.

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆ ನಾಳೆ ಆರಂಭ; ರಾಜ್ಯ ಸಾರಿಗೆ ಸಂಸ್ಥೆಯಿಂದ, ವಿದ್ಯಾರ್ಥಿಗಳ ಉಚಿತ ಪ್ರಯಾಣಕ್ಕೆ, ಅನುಕೂಲ.

ಧಾರವಾಡ ತಾಲೂಕು, ಮನಸೂರಿನ, ಇಟ್ಟಿಗೆ ಭಟ್ಟಿಗಳಿಂದ, ನಾಲ್ವರು ಬಾಲ ಕಾರ್ಮಿಕರ ರಕ್ಷಣೆ.

ಪೋಲಿಯೋ ಜನ ಜಾಗೃತಿ; ಬೆಳಗಾವಿಯ ನರಸಿಂಹ ಜೋಶಿ, 2025-26ನೇ ಸಾಲಿನ, ರೋಟರಿ ಅಂತಾರಾಷ್ಟ್ರೀಯ ಸೇವಾ ಪ್ರಶಸ್ತಿಗೆ, ಭಾಜನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>